ಸಾಕ್ಷಿಯನ್ನು ದಿ: 12.02.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ ಃ-**

1. ಈ ದಾವೆಯನ್ನು ವಿಭಾಗ ಕೋರಿ ಸಲ್ಲಿಸಿರುತ್ತೇನೆ. ಈ ದಾವೆಯಲ್ಲಿ ಎರಡು ಸ್ವತ್ತುಗಳಿಗೆ ಸಂಬಂದಪಟ್ಟಂತೆ ಸಲ್ಲಿಸಿರುತ್ತೇನೆ. ನನ್ನ ತಂದೆ ಮೂಲತಃ ಹೆಚ್ ಬಸಾಪುರ ಗ್ರಾಮದವರು. ನನ್ನ ತಾತನ ಹೆಸರು ಸಿದ್ದರಾಮೇಗೌಡ. ನನ್ನ ಅಜ್ಜಿ ಹೆಸರು ಚೆನ್ನಮ್ಮ. ನನ್ನ ತಾತನಿಗೆ 4 ಜನ ಮಕ್ಕಳು ಅವರೆಂದರೆ ಶ್ರೀಕಂಠೇಗೌಡ, 1 ನೇ ಪ್ರತಿವಾದಿ ನನ್ನ ತಂದೆ, ಸರಸ್ವತಿ ಮತ್ತು ಪ್ರಮೀಳಮ್ಮ. ದಾವಾ ಸ್ವತ್ತುಗಳನ್ನು ಹೊರತು ಪಡಿಸಿ ನನ್ನ ತಂದೆಗೆ ಕೇತುಪುರ ಗ್ರಾಮದಲ್ಲಿ ಇನ್ನೂ ಆಸ್ತಿಗಳಿವೆ ಎಂದರೆ ಸರಿ. ಸದರಿ ಆಸ್ತಿಗಳ ನಂಬರುಗಳು ಗೊತ್ತಿಲ್ಲ. ಕೇತುಪುರದಲ್ಲಿ ನನ್ನ ತಂದೆಗೆ ಮನೆಯೂ ಇದೆ ಎಂದರೆ ಸರಿ. ಕೇತುಪುರದಲ್ಲಿರುವ ನನ್ನ ತಂದೆಯ ಎಲ್ಲಾ ಆಸ್ತಿಗಳನ್ನು ಸೇರಿಸಿಲ್ಲ. ನನ್ನನ್ನು ಕಗ್ಗಲೀಪುರ ಗ್ರಾಮಕ್ಕೆ ಮದುವೆ ಮಾಡಿಕೊಡಲಾಗಿದೆ. ನನ್ನ ಮದುವೆಯಾಗಿ 14 ವರ್ಷಗಳಾಗಿವೆ. ಕಗ್ಗಲೀಪುರಕ್ಕೂ ಮತ್ತು ಕೇತುಪುರಕ್ಕೂ 3 – 4 ಕಿ.ಮೀ ಅಂತರವಿರುತ್ತದೆ. ನನ್ನ ಅಜ್ಜಿ ಕೇತುಪುರ ಗ್ರಾಮದವರು ಎಂದರೆ ಸರಿ. ನನ್ನ ಅಜ್ಜಿಯನ್ನು ಹೆಚ್ ಬಸಾಪುರ ಗ್ರಾಮದಲ್ಲಿರುವ ನನ್ನ ಅಜ್ಜನಿಗೆ ಮದುವೆ ಮಾಡಿಕೊಡಲಾಗಿತ್ತು ಎಂದರೆ ಸರಿ. ನನ್ನ ಮುತ್ತಾತ ಹೆಸರು ಗೊತ್ತಿಲ್ಲ. ನನ್ನ ಮುತ್ತಾತನಿಗೆ ಎಷ್ಟು ಆಸ್ತಿ ಇತ್ತು ಗೊತ್ತಿಲ್ಲ. ಕೇತುಪುರದಲ್ಲಿರುವ ಆಸ್ತಿಗಳು ನನ್ನ ತಂದೆಗೆ ನನ್ನ ತಾತ ಮರಣ ಹೊಂದಿದ ನಂತರ ಬಂದಿರುತ್ತವೆ. ನನ್ನ ತಂದೆ ಕೇತುಪುರಕ್ಕೆ ನಾವು ಹುಟ್ಟುವ ಪೂರ್ವದಲ್ಲೇ ಹೋಗಿ ನೆಲೆಸಿದ್ದರು. ನಮ್ಮ ದೊಡ್ಡಪ್ಪ ಮತ್ತು ಕುಟುಂಬದವರು ಹೆಚ್ ಬಸಾಪುರ ಗ್ರಾಮದಲ್ಲೇ ವಾಸ ಮಾಡುತ್ತಿದ್ದಾರೆ. 3 ನೇ ಪ್ರತಿವಾದಿ ನನಗೆ ದೊಡ್ಡಮ್ಮನಾಗಬೇಕು. ನನ್ನ ತಂದೆ ಕೇತುಪುರಕ್ಕೆ ಹೋಗಿ ಸುಮಾರು 40 ವರ್ಷಗಳಾಗಿವೆ. ಬಸಾಪುರ ಗ್ರಾಮದಲ್ಲಿ ನನ್ನ ತಂದೆ ಎಷ್ಟು ಆಸ್ತಿಗಳಿವೆ ಗೊತ್ತಿಲ್ಲ. ನನ್ನ ತಂದೆಯ ಸಹೋದರಿಯರಾದ ಸರಸ್ವತಿ ಮತ್ತು ಪ್ರಮೀಳಮ್ಮರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ. ನಮ್ಮ ದೊಡ್ಡಪ್ಪನಿಗೆ ಎಪ್ಪು ಆಸ್ತಿಗಳಿವೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ಮೂಲಕ ಸಾಕ್ಷ್ಯದ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ